3

## ಮೂಲ ವಾಕ್ಯ: ಮತ್ತಾಯ 28:18

# ಕರ್ತನ ಭೋಜನದ ಅಧಿಕಾರ

ವಾರದ ಮೊದಲನೆಯ ದಿನದಲ್ಲಿ ಕರ್ತನ ಭೋಜನದ ಆಚರಣೆಯನ್ನು ಮಾಡಬೇಕೆಂಬ ಅಧಿಕಾರವನ್ನು ಕ್ರೈಸ್ತರು ಹೇಗೆ ಪಡೆದರು? ಇದು ಮನುಷ್ಯ ನಿರ್ಮಿಸಿದ ಆಚಾರವೇ ಅಥವಾ ದೇವರ ಅಪ್ಪಣೆಯೇ?

### ನಮ್ಮ ಅರಸನಾದ ಯೇಸು, ಆಳುತ್ತಾನೆ

ಕ್ರೈಸ್ತರ ಯುಗದಲ್ಲಿ, ಸಕಲ ಅಧಿಕಾರವನ್ನು ಯೇಸು ಹೊಂದಿದ್ದನು (ಮತ್ತಾಯ 28:18). ಆತನು ಪರಲೋಕದ ಸಿಂಹಾಸನದ ಬಲಗಡೆಗೆ ಏರಿಹೋದಾಗ, ಸಕಲ ಅಧಿಕಾರವನ್ನು ಆತನು ಹೊಂದಿದನು, ಎಂದು ನಾವು ಓದುತ್ತೇವೆ. ಆದ್ದರಿಂದ,

> ... ಆತನ [ದೇವರು] ಬಲಾತಿಶಯವು ಎಷ್ಟು ಮಹತ್ತಾದದ್ದೆಂಬದು ಕ್ರಿಸ್ತನಲ್ಲಿ ತೋರಿ ಬಂದಿದೆ. ಹೇಗಂದರೆ ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ ಮೇಲೆಯೂ ಈ ಲೋಕದಲ್ಲಿ ಮಾತ್ರವಲ್ಲದೆ ಬರುವ ಲೋಕದಲ್ಲಿ ಸಹ ಹೆಸರುಗೊಂಡವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು. ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ (ಎಫೆಸ 1:20-23).

ಆತನು ಆಳುವನು ಎಂದು ಐನೂರು ವರ್ಷಗಳ ಹಿಂದೆ ದಾನಿಯೇಲನು ಮಾಡಿದ ಪ್ರವಾದನೆಯು ಈಗ ನೆರವೇರಿತು (ದಾನಿಯೇಲ 7:13, 14).

ಯೇಸು ಏರಿಹೋದಾಗ, ದಾವೀದನ ಸಿಂಹಾಸನದ ಮೇಲಿನಿಂದ ಆಳ್ವಿಕೆ ನಡೆಸಿದನು. ಆತನ ವಡ್ಡೋಲಗದಲ್ಲಿ ಪ್ರವಾದಿಗಳು, ಯಾಜಕರು ಹಾಗೂ ಅರಸರು ಇರುವರು.[1] ಯೇಸು ಒಂದೇ ಸಮಯದಲ್ಲಿ ಅರಸನು ಹಾಗೂ ಯಾಜಕನು ಆಗಿ ತನ್ನ ಸಿಂಹಾಸನದಲ್ಲಿರುವನು ಎಂದು ಜೆಕರ್ಯನು ಪ್ರವಾದನೆ ಮಾಡಿದ್ದನು (ಜೆಕರ್ಯ 6:13). ಆತನು ಯಾಜಕನಾಗಿ, ಈ ಭೂಮಂಡದಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಗಲಿಲ್ಲ (ಇಬ್ರಿಯ 8:4); ಆತನು ಪರಲೋಕ ದಲ್ಲಿ ಮಾತ್ರ ಅರಸ ಹಾಗೂ ಯಾಜಕನಾಗಿ ಆಳ್ವಿಕೆ ನಡೆಸುವನು. ಈಗ ಆತನು ದೇವರ ಬಲಪಾರ್ಶ್ವದಲ್ಲಿ ಆಡಳಿತ ಮಾಡುತ್ತಿರುವನು.[2] ಸಕಲವೂ ಆತನ ಪಾದಗಳ ಕೆಳಗೆ ಇರುವದರಿಂದ, ಆತನು ಎಲ್ಲರ ಮೇಲೆ ಆಳ್ವಿಕೆ ಮಾಡುವನು (1 ಕೊರಿಂಥ 15:27).

### ಕ್ರೈಸ್ತತ್ವಕ್ಕೆ ಯೇಸು ಬುನಾದಿ ಹಾಗೂ ಅಧಿಕಾರಿಯಾಗಿದ್ದಾನೆ

ರಕ್ಷಣೆಯ ಕುರಿತು ಯೇಸು ಮೊದಲ ಬಾರಿ ಮಾತನಾಡಿದನು (ಇಬ್ರಿಯ 2:3). ಕ್ರೈಸ್ತರ ಸಕಲ ಆಚರಣೆಗೆ ಆತನೇ ಬುನಾದಿ (ಇಬ್ರಿಯ 2:10ಬಿ; 12:2) ಆತನು ಒಂದು ಆಚರಣೆಯನ್ನು ಉಪದೇಶಿಸಿದ್ದರೆ ಅದನ್ನು ನಾವು ಪಾಲಿಸಬೇಕು, ಉಪದೇಶಿಸದಿದ್ದರೆ ಪಾಲಿಸಬಾರದು. ತಂದೆಯಿಂದ ಪಡೆದ ಅಪ್ಪಣೆಗಳನ್ನು ಆತನು ಬೋಧಿಸಿದನು (ಯೋಹಾನ 12:49, 50)

ಅಪೊಸ್ತಲರಿಗೆ ಅದನ್ನು ಮೌಖಿಕವಾಗಿ ತಿಳಿಸಿದನು (ಯೋಹಾನ 17:8, 14). ಆತನು ಏರಿ ಹೋದ ನಂತರ ಪವಿತ್ರಾತ್ಮನು ಅವುಗಳನ್ನು ತಿಳಿಸಿದನು (ಯೋಹಾನ 14:26; 16:7-14).

ಅಪೊಸ್ತಲರು ಹಾಗೂ ಪ್ರವಾದಿಗಳು ಬರೆದ ಹೊಸ ಒಡಂಬಡಿಕೆಯಲ್ಲಿ, ಯೇಸು ತನ್ನ ಅಪ್ಪಣೆಗಳನ್ನು ತಿಳಿಸಿರುವನು, ಅದು ದೇವರ ವಾಕ್ಯವೇ. ಯಾಕೆಂದರೆ ದೇವರು ಈ ಕಡೇ ದಿವಸಗಳಲ್ಲಿ ಈ ವಿಚಾರಗಳನ್ನು ಯೇಸುವಿನ ಮೂಲಕ ತಿಳಿಸಿರುವನು (ಇಬ್ರಿಯ 1:1, 2), ಆದ್ದರಿಂದ ಆ ಮಾತುಗಳಿಗೆ ಲಕ್ಷ್ಯವಿಡಬೇಕು. ಅದನ್ನು ಲಕ್ಷಿಸದವರು ಜನರ ಮಧ್ಯದಿಂದ ನಾಶವಾಗುವರು.

ಯೇಸು ಸಭೆಗೆ ಬುನಾದಿ, ಆ ಬುನಾದಿಯಲ್ಲಿ ಸಭೆಯು ಕಟ್ಟಲ್ಪಟ್ಟಿದೆ (ಎಫೆಸ 5:24). ಆತನು ಅದರ “ಶಿರಸ್ಸು” (ಕೊಲೊಸ್ಸೆ 1:18) ಮತ್ತು “ನಿಯಮ ನೀಡಿದವನು” (ಯಾಕೋಬ 4:12). ಸಕಲ ಜನರು ಆತನಿಂದ ತೀರ್ಪಿಗೆ ಒಳಗಾಗುವರು (ಯೋಹಾನ 5:22; 2 ಕೊರಿಂಥ 5:10; ಅಪೊಸ್ತಲರ ಕೃತ್ಯಗಳು 17:31).

## ಯೇಸುವೇ, ನಮ್ಮ ಮಾರ್ಗದರ್ಶನಗಳಿಗೆ ಮೂಲ

ಕ್ರಿಸ್ತನ ಅಧಿಕಾರಕ್ಕೆ ಒಳಪಡುವದಕ್ಕೆ ಕೆಲವು ನಿಯಮಗಳಿವೆ. ಅವುಗಳನ್ನು ನಾವುಗಳು ಪಾಲಿಸದಿದ್ದರೆ, ಯೇಸುವಿಗೆ ಸಲ್ಲಬೇಕಾದ ಘನವನ್ನು ನಾವು ಸಲ್ಲಿಸುವದಿಲ್ಲ.

(1) ಆತನ ಅನುಯಾಯಿಗಳು, ಆತನ ಅಪ್ಪಣೆಗಳನ್ನೇ ಪಾಲಿಸಬೇಕು ವಿನಃ ಅದಕ್ಕಿಂತ ಹೆಚ್ಚಿನದನ್ನು ಮಾಡಬಾರದು (ಮತ್ತಾಯ 28:20; 1 ಕೊರಿಂಥ 4:6; 2 ಯೋಹಾನ 9; ನೋಡಿರಿ ಯಾಕೋಬ 1:22).

(2) ಭಕ್ತಿಯ ವೃದ್ಧಿಗೆ ಅವಶ್ಯವಾದ ಸಕಲ ಸತ್ಯಗಳನ್ನು ಪವಿತ್ರಾತ್ಮನು ಪ್ರಕಟಿಸಿದ್ದಾನೆ (ಯೋಹಾನ 16:13; 2 ಪೇತ್ರ 1:3).

(3) ಆತನು ತಿಳುವಳಿಕೆ ಮತ್ತು ಸಾಮರ್ಥ್ಯ ಹೊಂದಿದವನಾಗಿರುವದರಿಂದ, ಸಕಲರು ಅರ್ಥ ಮಾಡಿಕೊಳ್ಳಬಹುದಾದ ಸತ್ಯಗಳನ್ನು ಪವಿತ್ರಾತ್ಮನ ಮೂಲಕ ತಿಳಿಸಿರುವನು (1 ಕೊರಿಂಥ 2:12, 13; 2 ಕೊರಿಂಥ 1:13; ಎಫೆಸ 3:3-5).

(4) ಆತನು ಪ್ರಕಟಿಸಬೇಕಾದದ್ದನ್ನು ಪ್ರಕಟಿಸಿರುವದರಿಂದ, ಅದನ್ನು ತಿರುಚಿ ಅಪಾರ್ಥಮಾಡುವ ಸಂಬವವಿರುವದಿಲ್ಲ (2 ಕೊರಿಂಥ 4:2; 2 ಪೇತ್ರ 3:16, 17).

(5) ಯಾರ್‍ಯಾರು ಇದನ್ನು ಹೊರತು ಪಡಿಸಿ, ಅನಗತ್ಯ ಸಂಗತಿಗಳನ್ನು ಉಪದೇಶಿಸುವವರು ದಂಡನೆಗೆ ಒಳಗಾಗುವರು (ಗಲಾತ್ಯ 1:8, 9) ಮತ್ತು ನಾಶವಾಗುವರು (ಅಪೊಸ್ತಲರ ಕೃತ್ಯಗಳು 3:22, 23). ಆತನ ವಾಕ್ಯವನ್ನು ನಿರ್ನಾಮ ಮಾಡುವ ಯಾವುದೇ ವಿಚಾರಗಳನ್ನು ಅದಕ್ಕೆ ಸೇರಿಸಬಾರದು.

(6) ಆತನ ಭೋದನೆಗಳನ್ನು ದೇವರ ವಾಕ್ಯವೆಂದು ತಿಳಿದುಕೊಳ್ಳಬೇಕು, ಮನುಷ್ಯರ ವಾಕ್ಯವೆಂದು ತಿಳಿಯಬಾರದು (1 ಥೆಸಲೋನಿಕ 2:13).

(7) ಪ್ರಕಟಗೊಂಡ ವಾಕ್ಯಗಳು ಸಕಲ ಉಪದೇಶಗಳಿಗೆ ಮೂಲವಾಗಿದೆ. ಅದು ದೇವರ ಮಕ್ಕಳನ್ನು ಸಕಲ ಕಾರ್ಯಗಳಿಗೆ ನಡಿಸುತ್ತದೆ (ಯೋಹಾನ 16:13; 2 ತಿಮೋಥೆ 3:16, 17).

(8) ಆತನು ಸಕಲ ಸತ್ಯಗಳನ್ನು ಪ್ರಕಟಿಸಿರುವದರಿಂದ, ಅದು ಪರಿಪೂರ್ಣವಾಗಿರುತ್ತದೆ (ಯಾಕೋಬ 1:25). ದೇವರು ಒಂದು ಸಾರಿ ಮಾತನಾಡಿದ ನಂತರ, ಅದಕ್ಕೆ ಬೇರೆ ವಿಚಾರವನ್ನು ಸೇರಿಸುವದಿಲ್ಲ.

ಅಪೊಸ್ತಲರಿಗೆ ಯೇಸು ನೀಡಿದ ಬೋಧನೆಗಳಲ್ಲಿ ಕರ್ತನ ಭೋಜನದ ಅಧಿಕಾರವು ಒಳಗೊಂಡಿದೆ (ಮತ್ತಾಯ 26:26-28; ಮಾರ್ಕ 14:22-24; ಲೂಕ 22:17-20); ಮತ್ತು ಪೌಲನಿಗೆ ನೀಡಲಾದ ಪ್ರಕಟನೆಯಲ್ಲೂ ಅದು ಅಡಕವಾಗಿದೆ (1 ಕೊರಿಂಥ 10:16-21;

11:23-34). ಯೇಸುವಿನ ಕಾಲದಲ್ಲಿ ಪೌಲನು, ಆತನ ಸಂಗಡ ಇಲ್ಲದೆ ಇದ್ದದರಿಂದ, ಈ ಕುರಿತ ಉಪದೇಶಗಳನ್ನು ಬೇರೆಯವರಿಂದ ಪಡೆದನು ಎಂದು ಕೆಲವರು ಪಂಡಿತರು ತಿಳಿಸಿದ್ದಾರೆ. ಯೇಸು ಇತರರಿಗೆ ತಿಳಿಸಿದ ಹಾಗೆ ಪವಿತ್ರಾತ್ಮನ ಮೂಲಕವಾಗಿಯೇ ಸಲಹೆ ಸೂಚನೆಗಳನ್ನು ಪೌಲನಿಗೆ ನೀಡಿದನು ಎಂಬುದು ಪ್ರಮುಖ ಊಹೆಯಾಗಿದೆ (ಎಫೆಸ 3:3-5). ಇದರ ಕುರಿತು ಲಿಯಾನ್ ಮಾರಿಸ್‌ರವರು, "ಪೌಲನಿಗುಂಟಾದ ನೇರ ಪ್ರಕಟನೆಗಳ ಕುರಿತು ಹೇಳಿರುವರು (ಅಪೊಸ್ತಲರ ಕೃತ್ಯ ಗಳು 18:9, 10; 22:18; 23:11; 27;23-25; ಗಲಾತ್ಯ 1:12; 2:2; 2 ಕೊರಿಂಥ 12:7) ಇದು ವಿಶೇಷವಾದದ್ದೇ."[3]

## ಸಾರಾಂಶ

ಕ್ರೈಸ್ತರ ಯುಗದಲ್ಲಿ, ಯೇಸುವಿಗೆ ಪರಲೋಕ, ಭೂಲೋಕಗಳಲ್ಲಿ ಸರ್ವಾಧಿಕಾರವನ್ನು ನೀಡಲಾಗಿದೆ (ಮತ್ತಾಯ 28:18). ಸಕಲ ಕ್ರಿಯೆಗಳಿಗೂ ಆತನ ವಾಕ್ಯವೇ ಅಂತಿಮ ನಿರ್ಧಾರವಾಗಿದೆ. ಆತನ ಮಾತನ್ನು ಕೇಳಿ, ಅದನ್ನು ಹಿಂಬಾಲಿಸುವವರು ತಮ್ಮ ಮನೆಯನ್ನು ಬಂಡೆಯ ಮೇಲೆ ಕಟ್ಟಿರುತ್ತಾರೆ, ಹಿಂಸೆಯ ಸಮಯದಲ್ಲಿ ಅದು ಬಿದ್ದು ಹೋಗುವದಿಲ್ಲ, ವಿಧೇಯರಾಗದವರು, ಮರಳಿನ ಮೇಲೆ ತಮ್ಮ ಮನೆಯನ್ನು ಕಟ್ಟಿರುವರು, ಬಿರುಗಾಳಿ ಬಂದಾಗಿ ಅದು ದೃಢವಾಗಿ ನಿಲ್ಲಲಾರದು (ಮತ್ತಾಯ 7:24-27).

---

ಟಿಪ್ಪಣಿಗಳು

[1]ಪ್ರವಾದಿಯಾಗಿ, ಯಾಜಕನಾಗಿ, ರಾಜನಾಗಿ, ಕ್ರಿಸ್ತನ ಪಾತ್ರ ನೋಡಿರಿ ಅಪೊಸ್ತಲರ ಕೃತ್ಯಗಳು 3:22, 23; ಇಬ್ರಿಯ 3:1; 4:14; 6:20; 8:1; ಯೆಶಾಯ 9:6, 7; ಲೂಕ 1:32, 33; ಯೋಹಾನ 18:37; 1 ತಿಮೊಥೆ 6:13-16; ಪ್ರಕಟನೆ 3:21; 17:14; 19:16. [2]ನೋಡಿ ಅಪೊಸ್ತಲರ ಕೃತ್ಯಗಳು 2:33; 5:31; ರೋಮಾಪುರ 8:34; ಕೊಲೊಸ್ಸೆ 3:1; ಇಬ್ರಿಯ 1:3; 8:1; 12:2; 1 ಪೇತ್ರ 3:22. [3]Leon Morris, *The First Epistle of Paul to the Corinthians* (Grand Rapids, Mich.: Wm. B. Eerdmans Publishing Co., 1958), 159.